

ವಿವಾಹಬಾಹಿರ ಸಂಬಂಧಗಳ ಬಗ್ಗೆ ನಮ್ಮ ಸಮಾಜದಲ್ಲಿ ಮುಕ್ತವಾಗಿ ಮಾತನಾಡುವುದು ಸ್ವಲ್ಪ ಕಷ್ಟ. ಮಾತನಾಡುವವರಿಗಿಂತ ಕೇಳುವವರಿಗೆ ಆಗುವ ಮುಜುಗರವೇ ಹೆಚ್ಚು. ಹಾಗಂತ ಇದರ ಬಗ್ಗೆ ನಮಗ್ಯಾರಿಗೂ ಆಸಕ್ತಿಯೇ ಇಲ್ಲವೆಂದೇನಲ್ಲ! 'ಗಾಸಿಪ್' ವಲಯಗಳಿಗೆ ಮಾತ್ರ ಸೀಮಿತವಾಗಿರುವ ಈ ವಿಚಾರವನ್ನು ಈಗ ಮುಕ್ತವಾಗಿ ಚರ್ಚಿಸಲೇಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ದಾಂಪತ್ಯ ವ್ಯವಸ್ಥೆಯ ಮೇಲೆ ಇದು ಬೀರುತ್ತಿರುವ ಪರಿಣಾಮದ ಸ್ವರೂಪ, ಆಳ– ವಿಸ್ತಾರಗಳೆಲ್ಲಾ ಹೆಚ್ಚುತ್ತಿವೆ.

ಕಳೆದ ದಶಕದಿಂದ ಇಂತಹ ಸಂಬಂಧಗಳ ವ್ಯಾಖ್ಯೆಯನ್ನು ವಿಸ್ತರಿಸಲಾಗಿದೆ. ದಂಪತಿಗಳಲ್ಲಿ ಆಗುವಂತೆ ಮದುವೆಯಾಗದ ಬದ್ಧಸಂಬಂಧಗಳಲ್ಲಿ ಮತ್ತು ಸಲಿಂಗ ಪ್ರೇಮಿಗಳಲ್ಲಿ ಹೊರಸಂಬಂಧಗಳಾದಾಗ ಸಂಗಾತಿಗಳ ಮೇಲೆ ಮತ್ತು ಅವರ ಸಂಬಂಧದ ಮೇಲೆ ಬೀರುವ ಪರಿಣಾಮಗಳು ಒಂದೇ ರೀತಿಯಾಗಿರುತ್ತವೆ. ಹಾಗಾಗಿ ಇತ್ತೀಚೆಗೆ **extra marital affairs** ಎನ್ನುವ ಬದಲು ಕೇವಲ **affairs** ಎಂದಷ್ಟೇ ಕರೆಯಲಾಗುತ್ತದೆ. ಈ ಬರಹದಲ್ಲಿ 'ವಿವಾಹಬಾಹಿರ ಸಂಬಂಧಗಳು' ಎನ್ನುವ ಶಬ್ದವನ್ನು ಉಪಯೋಗಿಸಿದ್ದೇನೆ.

ಧಾರ್ಮಿಕ ಮತ್ತು ನೈತಿಕ ದೃಷ್ಟಿಯಿಂದ ನಿಜವಾದ ದೈಹಿಕ ಹೊರಸಂಬಂಧ ಬೆಳೆಸುವುದಿರಲಿ, ಅದರ ಕುರಿತು ಮನಸ್ಸಿನಲ್ಲಿ ಮೂಡುವ ಆಸಕ್ತಿ, ಬರುವ ಯೋಚನೆ, ಕಲ್ಪನೆಗಳೂ ಕೂಡ ಮಹಾಪರಾಧ. ಆದರೆ ಹೊರಗಡೆ ಒಪ್ಪಿಕೊಳ್ಳದಿದ್ದರೂ ನಮ್ಮೆಲ್ಲರ ಆತ್ಮಗಳಿಗೆ ತಿಳಿದಿರುವ ವಿಚಾರವೆಂದರೆ, ಸಂಗಾತಿಯನ್ನು ಹೊರತಾಗಿಸಿ ಇತರರ ಬಗ್ಗೆ ಲೈಂಗಿಕ ಕಲ್ಪನೆಗಳು ಎಲ್ಲರಲ್ಲೂ ಒಮ್ಮೆಯಾದರೂ ಬರದೆ ಇರಲು ಸಾಧ್ಯವೇ ಇಲ್ಲ. ಹಾಗಾಗಿ ಈ ಬರಹದ ವ್ಯಾಪ್ತಿಗೆ ಅಂತಹ ಸಹಜ ಕಲ್ಪನಾವಿಲಾಸವನ್ನು ಹೊರತಾಗಿಸಲಾಗಿದೆ. ವಾಸ್ತವದಲ್ಲಿ ಇರುವ ದೈಹಿಕ ಸಂಬಂಧ ಅಥವಾ ನಿಧಾನವಾಗಿ ದೈಹಿಕ ಸಂಬಂಧದ ಕಡೆ ತಿರುಗಬಹುದಾದ (ಇದನ್ನು ನಿರ್ಧರಿಸುವುದು ಕಷ್ಟ ಎನ್ನುವುದು ನೆನಪಿರಲಿ)  ಭಾವನಾತ್ಮಕ ಸೆಳೆತಗಳ ವ್ಯಾಪ್ತಿಯಲ್ಲಿ ಹೊರಸಂಬಂಧಗಳ ಬಗ್ಗೆ ಇಲ್ಲಿ ಒಂದು ನೋಟ ಹರಿಸಲಾಗಿದೆ.

